(187)

1528ನೇ ಸಂಖ್ಯೆ

ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಡಾ: ಯತೀಂದ್ರ ಎಸ್. ರವರು ನಿಯಮ-72ರಡಿ ಮಂಡಿಸಿರುವ ಸೂಚನೆಗೆ ಸರ್ಕಾರದ ಹೇಳಿಕೆ.

ಸೂಚನೆ:-

ರೈತರು ಭೂ ಕಂದಾಯ ಪಾವತಿಸದೇ ಇರುವುದರಿಂದ ಸುಮಾರು 50-60 ವರ್ಷಗಳ ಹಿಂದೆ ಹಿಡುವಳಿ ಜಮೀನುಗಳನ್ನು ಬೀಳು ಎಂದು ನಮೂದಿಸಿದ್ದು, ಮೂಲ ಖಾತೆದಾರರ ವಾರಸುದಾರರು ನೂರಾರು ವರ್ಷಗಳಿಂದಲೂ ಅನುಭವಿಸಿಕೊಂಡು ಬರುತ್ತಿದ್ದು, ಅವರ ಪಿತ್ರಾರ್ಜಿತ ಜಮೀನುಗಳನ್ನು ಖಾತೆ ಮಾಡಿಸಿಕೊಳ್ಳಲು ಹಾಗೂ ಬೀಳನ್ನು ರೆಸ್ಟೋರ್ ಮಾಡಿಕೊಡಲು ಜಿಲ್ಲಾಧಿಕಾರಿಗಳು ಹಾಗೂ ತಹಶೀಲ್ದಾರ್ ಕಛೇರಿಗಳಿಗೆ ರೈತರು ಮನವಿ ಸಲ್ಲಿಸಿದ್ದರೂ ಸಹ ಕಂದಾಯಾಧಿಕಾರಿಗಳು ಬೀಳು ರೆಸ್ಟೋರ್ ಮಾಡಲು ಸರ್ಕಾರ ಆದೇಶ ನೀಡಿವುದಿಲ್ಲವೆಂದು ಸಬೂಬು ಹೇಳಿ ರೈತರ ಅರ್ಜಿಗಳನ್ನು ವಿಲೇ ಇಡುತ್ತಿದ್ದಾರೆ ಹಾಗೂ ಆರ್.ಟಿ.ಸಿ.ಯಲ್ಲಿ ಸಣ್ಣ ಪುಟ್ಟ ತಿದ್ದುಪಡಿಗಳನ್ನು ಮಾಡಲು ರೈತರು ತಹಶೀಲ್ದಾರ್ ಕಛೇರಿಗಳಿಗೆ ಅಲೆದಾಡುತ್ತಿದ್ದು, ಸದರಿ ಕಛೇರಿಯಲ್ಲಿ ತಿದ್ದುಪಡಿ ಮಾಡಲು ಅವಕಾಶವಿಲ್ಲವೆಂದು ರೈತರ ಅರ್ಜಿಗಳನ್ನು ಉಪವಿಭಾಗಾಧಿಕಾರಿಗಳ ಕಛೇರಿಗೆ ಕಳುಹಿಸುತ್ತಿರುತ್ತಾರೆ. ಇದರಿಂದ ರೈತರು ಸಣ್ಣ ಪುಟ್ಟ ಕೆಲಸಕ್ಕೆ ಎ.ಸಿ. ಕಛೇರಿಗೆ ಅಲೆದಾಡುಬೇಕಿರುವುದರಿಂದ ಆರ್.ಟಿ.ಸಿ.ಯಲ್ಲಿ ತಿದ್ದುಪಡಿ ಮಾಡಲು ಶಾಶ್ವತವಾಗಿ ತಹಶೀಲ್ದಾರ್ ರವರಿಗೆ ಅಧಿಕಾರ ನೀಡಬೇಕಾಗಿದೆ ಹಾಗೂ ಬೀಳು ರೆಸ್ಟೋರ್ ಕೋರಿ ರೈತರು ಯಾವಗಬೇಕಾದರೂ ಅರ್ಜಿ ಸಲ್ಲಿಸಲು ಅಧಿಸೂಚನೆ ಹೊರಡಿಸಿ ಅವಕಾಶ ಮಾಡಿಕೊಡಲು ಮಾನ್ಯ ಕಂದಾಯ ಸಚಿವರ ಗಮನ ಸೆಳೆಯಬಯಸುತ್ತೇನೆ.

ಹೇಳಿಕೆ:

ಸರ್ಕಾರಿ ಜಮೀನುಗಳನ್ನು ಸಾಗುವಳಿ ಮಾಡಲು ಮಂಜೂರು ಮಾಡಿರುವಂತಹ ಅನೇಕ ಪ್ರಕರಣಗಳಲ್ಲಿ, ರೈತರು ಸರ್ಕಾರಕ್ಕೆ ಸಲ್ಲಿಸಬೇಕಾದ ಕಂದಾಯವನ್ನು ಪಾವತಿಸದೇ ಇದ್ದಂತಹ ಸಂದರ್ಭಗಳಲ್ಲಿ ಅಂತಹ ಜಮೀನುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುತ್ತದೆ. ಹೀಗೇ ಮುಟ್ಟುಗೋಲು ಹಾಕಿಕೊಳ್ಳಲಾದ ಬೀಳು ಜಮೀನುಗಳನ್ನು 'ಪಡಾ' ಜಮೀನುಗಳೆಂದು ಕರೆಯಲಾಗುತ್ತದೆ. ರೈತರು ಬಾಕಿ ಇರುವ ಮೊಬಲಗನ್ನು ಸರ್ಕಾರಕ್ಕೆ ಸಂದಾಯ ಮಾಡಿದ ಮೇಲೆ ಪುನಃ ಸದರಿ ಜಮೀನಿನ ಅಧಿಭೋಗದ ಹಕ್ಕನ್ನು ಅವರಿಗೆ ಪುನರ್ ಸ್ಥಾಪಿಸಲು ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 119ರಲ್ಲಿ ಅವಕಾಶ ಕಲ್ಪಿಸಲಾಗಿದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಆರ್.ಡಿ. 37 ಎಲ್.ಜಿ.ಪಿ. 1988 ದಿನಾಂಕ: 24.03.1990ರಲ್ಲಿ ದಿನಾಂಕ: 01.04.1988ರಿಂದ ಜಾರಿಗೆ ಬರುವಂತೆ ನಿಯಮ 119ಕ್ಕೆ ತಿದ್ದುಪಡಿ ತಂದು ಉಪ ನಿಯಮ-2 ಅನ್ನು ಸೇರಿಸಿ 'ಪಡಾ' ಜಮೀನುಗಳನ್ನು ಪುನರ್ ಸ್ಥಾಪಿಸುವುದಕ್ಕಾಗಿ ಅರ್ಜಿ ಸಲ್ಲಿಸಲು ಕಾಲಾವಕಾಶ ಕಲ್ಪಿಸಲಾಗಿದೆ. ಈ ಬಗ್ಗೆ ಸರ್ಕಾರವು ಕಾಲಕಾಲಕ್ಕೆ ಅವಧಿ ವಿಸ್ತರಿಸುತ್ತಾ ಬಂದಿದ್ದು, ಈ ಹಿಂದೆ ಅಂದರೆ ದಿನಾಂಕ: 06.09.2014ರವರೆಗೆ ವಿಸ್ತರಿಸಲಾಗಿರುತ್ತದೆ,

ಭೂ ಕಂದಾಯ ಬಾಕಿಯಿರುವ ಜಮೀನುಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 119(2)ಕ್ಕೆ ತಿದ್ದುಪಡಿ ಮಾಡಿ ಅವಧಿಯನ್ನು ವಿಸ್ತರಿಸಿರುವ ಕುರಿತು ದಿನಾಂಕ: 23.03.2023ರಂದು ಕರಡು ನಿಯಮಗಳ ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಅಂತಿಮ ಅಧಿಸೂಚನೆಯನ್ನು ಹೊರಡಿಸುವ ಕುರಿತು ಪರಿಶೀಲಿಸಲು ಜಿಲ್ಲಾವಾರು ಮಾಹಿತಿಯನ್ನು ಪಡೆಯಲಾಗಿದ್ದು ಪ್ರಸ್ತಾವನೆಯು ಪರಿಶೀಲನೆಯ ಹಂತದಲ್ಲಿರುತ್ತದೆ.

ಮುಂದುವರಿದು, ಆರ್.ಟಿ.ಸಿ.ಯಲ್ಲಿ ಸಣ್ಣ ಪುಟ್ಟ ತಿದ್ದುಪಡಿಯನ್ನು ಮಾಡುವ ಪ್ರಕ್ರಿಯೆಯನ್ನು ಸರಳೀಕರಿಸಲು ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ. 45 ಎಂ.ಆರ್.ಆರ್. 2025, ದಿನಾಂಕ: 23.03.2026ರಲ್ಲಿ ಕಂದಾಯ ಆದಾಲತ್ ಕಾರ್ಯಕ್ರಮದ ಮೂಲಕ ಪಹಣಿಯನ್ನು ತಿದ್ದುಪಡಿ ಮಾಡುವ ಅಧಿಕಾರವನ್ನು ತಹಶೀಲ್ದಾರ್‌ರವರಿಗೆ ಪ್ರತ್ಯಾಯೋಜಿಸಲಾಗಿದೆ ಹಾಗೂ ಸೂಕ್ತ ಮಾರ್ಗಸೂಚಿಗಳನ್ನು ನೀಡಲಾಗಿದೆ.

ಸಂಖ್ಯೆ: ಆರ್‌ಡಿ 88 ಎಲ್‌ಜಿಕ್ಯೂ 2026

(ಕೃಷ್ಣ ಬೈರೇಗೌಡ)
ಕಂದಾಯ ಸಚಿವರು